ಅಸಲು ದಾವಾ.ನಂ. 19/2018
ಪಿ ಡಬ್ಲ್ಯೂ-1

ದಿನಾಂಕಃ 01-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಸಿ.ಆರ್.ಎಸ್. ವಕೀಲರಿಂದ:**

ನನ್ನ ಮುತ್ತಜ್ಜನ ಹೆಸರು ಕೆಂಚಪ್ಪ. ಸದರಿ ಕೆಂಚಪ್ಪ ಇವರಿಗೆ ಮೂರು ಜನ ಮಕ್ಕಳು, ಅವರೆಂದರೆ ಲಕ್ಕಪ್ಪ, ಫಕೀರಪ್ಪ ಮತ್ತು ವಿಠ್ಠಪ್ಪ. ಸದರಿ ಮೂರು ಜನ ಮೃತಪಟ್ಟಿರುತ್ತಾರೆ. ಫಕೀರಪ್ಪ ಇವರಿಗೆ ಬೀರಪ್ಪ, ಸೋಮಲಿಂಗ, ಗೌರವ್ವ ಮತ್ತು ಹನಮವ್ವ ಇರುತ್ತಾರೆ. ಸದರಿ ಗೌರವ್ವ ಮತ್ತು ಹನಮವ್ವ ಮೃತಪಟ್ಟಿರುತ್ತಾರೆ. ಲಕ್ಕಪ್ಪ ಇವರಿಗೆ 6 ಜನ ಮಕ್ಕಳು, ಅವರೆಂದರೆ, ಕೆಂಚಪ್ಪ, ಭೀಮಶಿ, ಶಿವರಾಯ, ಬೀರಪ್ಪ, ಸಿಂಗಾಡಿ ಮತ್ತು ಯಂಕಣ್ಣ. ವಿಠ್ಠಲ ಇವರಿಗೆ ಮಹಾದೇವ ಎಂಬ ಒಬ್ಬಳೆ ಹೆಣ್ಣು ಮಗಳು. ಶಿವರಾಯ ಇವರು ಮೃತಪಟ್ಟಿದ್ದು, ಇವರಿಗೆ ಮಾರುತಿ, ಮಾಳಪ್ಪ, ನಾಗಪ್ಪ ಮತ್ತು ವಿಠ್ಠಲ ಎಂಬ ಮಕ್ಕಳು ಇರುತ್ತಾರೆ. ಇವರ ಪೈಕಿ ಮಾರುತಿ ಮೃತಪಟ್ಟಿರುತ್ತಾರೆ. ಈ ಮೇಲೆ ಹೇಳಿದ ವಂಶಾವಳಿಯನ್ನು ನನ್ನ ವಾದ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ಸದರಿ ವಿಷಯ ವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ನನ್ನ ಮುತ್ತಜ್ಜ ಕೆಂಚಪ್ಪ ಇವರಿಗೆ ಯಾವ ಗ್ರಾಮದಲ್ಲಿ ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ.

ನಾನು ಬೀರಪ್ಪನ ಮಗ ಎಂದರೆ ಸರಿ. ನನ್ನ ಕಾಕಾ ಸೋಮಲಿಂಗ 9 ನೇ ಪ್ರತಿವಾದಿ ಜೀವಂತ ಇರುತ್ತಾರೆ. ನನ್ನ ಮುತ್ತಜ್ಜ ಇವರ ಕುಟುಂಬಕ್ಕೆ ಒಟ್ಟು ಎಷ್ಟು ಆಸ್ತಿ ಇತ್ತು ಎಂದು ನನಗಿಂತ 9 ನೇ ಪ್ರತಿವಾದಿಗೆ ಮಾಹಿತಿ ಹೆಚ್ಚಾಗಿ ಇರುತ್ತದೆ ಎಂದರೆ ಸರಿ. ವಾದ ಪತ್ರದಲ್ಲಿ ನಮ್ಮ ಒಟ್ಟು ಕುಟುಂಬದ ಸದಸ್ಯರ ಬಗ್ಗೆ ಮಾಹಿತಿ ಮತ್ತು ಕುಟುಂಬದ ಆಸ್ತಿಗಳ ಬಗ್ಗೆ ವಿವರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಕೆಂಚಪ್ಪ ಇವರ ನಾಲ್ಕು ಜನ ಮಕ್ಕಳು ಆಸ್ತಿಗಳನ್ನು ಯಾವ ವರ್ಷದಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ, ಯಾವ ಗ್ರಾಮದ ಎಷ್ಟು ಆಸ್ತಿ ಯಾರಿಗೆ ಬಂದಿರುತ್ತದೆ ಎಂದು ತೋರಿಸಲು ದಾಖಲೆಗಳನ್ನು ಹಾಜರಪಡಿಸಿರುವುದಿಲ್ಲ. ಯಾರು, ಯಾವ ಗ್ರಾಮದಲ್ಲಿ ಜಮೀನು ಹೊಂದಿರುತ್ತಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ದಾವಾ ಆಸ್ತಿಯನ್ನು ನನ್ನ ತಂದೆ ಬೀರಪ್ಪ ಮತ್ತು 9 ನೇ ಪ್ರತಿವಾದಿ, ಪ್ರತಿವಾದಿಯರ ತಂದೆ ಶಿವರಾಯಪ್ಪ ಇವರಿಗೆ 2004 ರಲ್ಲಿ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಮೊದಲಿನಿಂದಲೂ ಶಿವರಾಯಪ್ಪ ಸ್ವಾಧೀನ ಹೊಂದಿದ್ದರು, ತದನಂತರ ಅವರ ಮಕ್ಕಳು ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜಿಯಂದಿರು ಸಗರವ್ವ, ಗೌರವ್ವ ಮತ್ತು

ಹನಮವ್ವ ದಾವಾ ಆಸ್ತಿಯನ್ನು ನನ್ನ ತಂದೆ ಹಾಗೂ 9 ನೇ ಪ್ರತಿವಾದಿಗೆ ವರ್ಗಾವಣೆ ಮಾಡಲು ಕಬೂಲಾತಿ ಪತ್ರ ಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಕಬೂಲಾತಿ ಪತ್ರದ ಆಧಾರದ ಮೇಲೆ ಎಂಆರ್ ನಂ.3337 ದಾಖಲಾಗಿದೆ ಎಂದರೆ ಸರಿ. ತದನಂತರ ನನ್ನ ತಂದೆ ಮತ್ತು 9 ನೇ ಪ್ರತಿವಾದಿ, ಆಸ್ತಿಯನ್ನು ಶಿವರಾಯಪ್ಪ ಇವರಿಂದ 70 ಸಾವಿರ ರೂಪಾಯಿ ಪಡೆದು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯ 9 ನೇ ಪ್ರತಿವಾದಿಗೆ ಗೊತ್ತು, 9 ನೇ ಪ್ರತಿವಾದಿ ನ್ಯಾಯಾಲಯದ ಮುಂದೆ ಸಾಕ್ಷಿ ನುಡಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮೂಲತಃ ನನ್ನ ಮುತ್ತಜ್ಜ ಕೆಂಚಪ್ಪ ಸಾಗುವಳಿ ಮಾಡುತ್ತಾ ಬಂದಿದ್ದ ಎಂದರೆ ಸರಿ.

ಈ ಹಂತದಲ್ಲಿ ಸದರಿ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ